REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 13 | ISSUE - 5 | FEBRUARY - 2024

# ಜೈನ ಸಾಹಿತ್ಯದಲ್ಲಿ: ಧರ್ಮ ಪ್ರಭುತ್ವ ಮತ್ತು ಜನತೆಯ ಸಂಕಥನ

ಡಾ. ಮಲ್ಲಿಕಾರ್ಜುನ ಪಿ. ಹುಲ್ಲೆ.
ಕನ್ನಡ ಅತಿಥಿ ಉಪನ್ಯಾಸಕರು , ಕನ್ನಡ ಅಧ್ಯಯನ ಸಂಸ್ಥೆ , ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ.




ದಕ್ಷಿಣ ಭಾರತದ ಭಾಗದಲ್ಲಿ ಜೈನ ಧರ್ಮದ ಇತಿಹಾಸವೆಂದರೆ, ಕರ್ನಾಟಕ ಜೈನ ಧರ್ಮದ ಇತಿಹಾಸವೇ ಆಗಿದೆ. ಬಿ.ಎ. ಸಾಲೆತ್ತೊರ (ಪ್ರಸಿದ್ದ ಇತಿಹಾಸಕಾರರು) ಅವರ ಮಾತು ಮುಖ್ಯವಾದುದು ಜೈನ ಧರ್ಮದ ತಿರುಳು ಆತ್ಮವು ತನ್ನ ಸಹಜ ಶುದ್ಧತೆಯನ್ನು ಮರಳಿ ಪಡೆದುಕೊಂಡು ಕೇವಲ ಜ್ಞಾನವನ್ನು ಪಡೆಯುವುದೇ ಜೀವನದ ಗುರಿ ಅದೊಂದು ಅಲೌಕಿಕ ಸ್ಥಿತಿ ಆತ್ಮವು ಆಗ ಎಲ್ಲ ಪರಿಪೂರ್ಣತೆ ಹೊಂದಿರುತ್ತದೆ. ಅನಂತ ಜ್ಞಾನ ಮಾತ್ರವಲ್ಲ ಅನಂತ ಶಾಂತಿ ಅನಂತ ಶಕ್ತಿಗಳನ್ನು ಹೊಂದಿರುತ್ತದೆ ಉಪನಿಷತ್ತಿನ ಭೋದನೆ ರೀತಿಯಲ್ಲಿ ಮೋಕ್ಷವೆಂದರೆ ಪುಣ್ಯ ಪಾಪಗಳನ್ನು ಮೀರಿ ನೀಲುವುದು ಇದನ್ನು ತೆಯಲು ಸಮ್ಯಗ್ ದರ್ಶನ ಜ್ಞಾನ ಚರಿತ್ರೆ ಮುಖ್ಯ. ಇವು ತ್ರಿರತ್ನಗಳು ಇಲ್ಲಿ ಯೋಗಕ್ಕೆ ಮಹತ್ವವಿದೆ. ಜೀವ ಅಜೀವಗಳಿಗೆ. ಸಂಬಂಧ ಕಲ್ಪನೆ ಮಾಡುವುದೆ ಕರ್ಮ (ಕರ್ಮ ಜಡವಸ್ತು) ಇದು ಬಿದ್ದು ಹೋಗುವುದೆ ನಿರ್ಜರ ಮೋಕ್ಷವೆಂಬುವದು ಒಂದು ಪರಿಪೂರ್ಣಸ್ಥಿತಿ ಒಬ್ಬ ಪರಮಾತ್ಮನನ್ನು ಒಪ್ಪುವದಿಲ್ಲ ಈ ಐದು ಕರ್ಮದ ಪ್ರವಾಸ (ಅಸ್ರವ) ಬಂಧನ (ಬಂಧ) ಅದನ್ನು ತಡೆವುದು (ಸಂವರ) ಅದು ಬಿದ್ದು ಹೋಗುವುದು (ನಿರ್ಜರ) ಮತ್ತು ಬಿಡುಗಡೆ (ಮೋಕ್ಷ) ಜತೆಗೆ ಜೀವ ಅಜೀವ=ಇವು ಸಪ್ತ ತತ್ವಗಳು ಈ ಏಳು ಕರ್ಮ ಸವಿಯುತ್ತ ಬಂದಂತೆ ಮೊಕ್ಷ ಸಮೀಪಿಸುತ್ತದೆ. ಮೋಕ್ಷವನ್ನು ಅಜರ ಅಮರ ಅಕ್ಷಯ ಅನುಪಮಸೌಖ್ಯ ಶಿವ ಅಚಲ ಅನಂತ ಅಪುನರಾವರ್ತಿಕ ಎನ್ನಲಾಗಿದೆ. ಇದನ್ನು ಪಡೆಯಲು ಅಂತಗಡದ ಸಾಬ ಎಂಬ ಗ್ರಂಥದಲ್ಲಿ ವಸ್ತು ತ್ಯಾಗ ದೇಹ ದಂಡನೆ ಬ್ರಹ್ಮಚಾರಿ ಸ್ನಾನ ಮಾಡುವದಿ ರುವುದು ಕೊಡೆ ಪಾದರಕ್ಷೆ ತ್ಯಾಜ್ಯ ನೆಲದ ಮೇಲೆ ಮಲಗುವುದು. ಭಿಕ್ಷೆ ಬೇಡುವುದು ಜೈನ ಧರ್ಮವನ್ನು ಮೊದಲಿಗೆ ಬೌದ್ಧ ಧರ್ಮದ ಒಂದು ಪ್ರಬೇದ ಎಂದು ನಂಬಲಾಗಿತ್ತು 24 ಜನ ತೀರ್ಥಂಕರಲ್ಲಿ ಕೊನೆಯವರೇ ಮಹಾವೀರ ಬುದ್ಧನ ಸಮಕಾಲೀನ ಅವದಿಗಿಂತ ಹಿಂದೆ 23 ತೀರ್ಥಂಕರ ಆಗಿ ಹೋಗಿದ್ದಾರೆ. ಶ್ವೇತಾಂಬರ್ ದಿಗಂಬರ್‌ರು ಎಂಬ ಎರಡೂ ಪಂಗಡಗಳಾಗಿವೆ.

ಇವನು 7ನೇ ಶತಮಾನದಲ್ಲಿ ಶ್ರೀವಣ ಬೆಳಗೊಳಕ್ಕೆ ಬಂದನ್ನು ಶ್ರವಣ ಬೆಳಗೊಳದ ಚಿಕ್ಕ ಬೆಟ್ಟವನ್ನು ಕಪ್ಪು ಎನ್ನುತ್ತಾರೆ. ಇದಕ್ಕೆ ವೆಳ್ಗೊಳ ಅದ್ರಿ ಎಂದು ಕರೆಯುತ್ತಿದ್ದರು. ಸ್ತ್ರೀಯರಿಗೆ ಈ ಜನ್ಮದಲ್ಲಿ ಮೋಕ್ಷ ಸಾಧ್ಯ ಎಂಬುವದು ಜೈನಧರ್ಮ ನಂಬುಗೆ. ಶ್ವೇತಾಂಬರರು ಉತ್ತರ ಭಾರತ ದಿಗಂಬರ್‌ರು ದಕ್ಷಿಣ ಭಾರತ ಬನವಾಸಿ ವೈಜಯಂತಿಪುರ ಯಾಪ ಜ್ಞಾಪಕ ಯುವಸಂಘದ ಗುರುಗಳು ಯಾಪಾ ನೀಯ ಪಂಥ ಜಾಪುಲಿ ಸಂಘ ಕ್ರಿ.ಶ.148 ರಲ್ಲಿ ಶ್ವೇತಾಂಬರ್ ಸಾಧು ಗುಲಬರ್ಗಾ ಜಿಲ್ಲೆಯ ಕಲ್ಯಾಣದಲ್ಲಿ ಸಂಘ ಸ್ಥಾಪಿಸಿದ 12ನೇ ಶತಮಾನದಲ್ಲಿ ಚೂಡಾಮಣಿ ಕಾವ್ಯದ ವರ್ಧಮಾನರನನ್ನು ದಂಡಿ ಹೊಗಳಿದ್ದಾನೆ. ಭಟಾಕಳಂಕ ಶಬ್ದಾನುಶಾಸನದಲ್ಲಿ ಹೇಳಿರುವ 96000 ಗ್ರಂಥ ಪರಿಮಿತಿಯುಳ್ಳ ಕೃತಿ ಚೂಡಾಮಣಿ ಕನ್ನಡದ್ದಿರಬೇಕು.

1. ಶಾಸ್ತ್ರದಾನ ಹರಿಯವ್ವೆ ಓದಲು ಶಾಸ್ತ್ರಮನ್ ಕೋಡುತಿದ್ದಳು ಪೊನ್ನನ ಶಾಂತಿಪುರಾಣದ 1 ಸಾವಿರ ಪ್ರತಿ ಮಾಡಿಸಿ ಶಾಸ್ತ್ರದಾನ ಕೊಟ್ಟವಳು ಅತ್ತಿಮಬ್ಬೆ.
2. ಕಂತಿ ಯರು ಪುರುಷರನ್ನು ನಿರ್ಗ್ರಂಥರು ಸವಣರು ಎಂದು ಕರೆದರೆ ಸನ್ಯಾಸಿನಿಯರನ್ನು ಕಂತಿಯರು ಅಜ್ಜಿಯರು ಎನ್ನುತ್ತಿದ್ದರು. (ಸಂಸ್ಕೃತದಲ್ಲಿ ಆರ್ಯಾ ಪ್ರಾಕೃತದಲ್ಲಿ > ಅಜ್ಜಿ) ಬುದ್ದ ಮೊದಲಾದವರು ಸ್ತ್ರೀಯರಿಗೆ ಸನ್ಯಾಸ ಕೊಟ್ಟಿರಲಿಲ್ಲ. ಆದರೆ, ಜೈನರು ಮೊದಲಿಗೆ ಕೊಟ್ಟಿದ್ದರು ಆದಿ ವೃಷಭನ ಹತ್ತರಿ ಬ್ರಾಹ್ಮೀ ಮತ್ತು ಸುಂದರಿಯರು ನೇತೃತ್ವದಲ್ಲಿ. 3 ಲಕ್ಷ ಸನ್ಯಾಸಿನಿಯರಿದ್ದರು ಇವರೂ ಲೋಯಿ (ಕೇಶ ವಿಚ್ಛೇದ) ಮಾಡಬೇಕಿತ್ತು ನಗ್ನತೆಯನ್ನು ವಿಧಿಸಿರಲಿಲ್ಲ ಬಳಿ ಬಟ್ಟೆ ಹಾಕಿಕೊಳ್ಳಬೇಕು ಬಿಸಿಲಲ್ಲಿ ಒಣಗಿಸ ಬಹುದು ನೀರಿನಲ್ಲಿ ಹಾಕಿ ಒಗೆಯಕೂಡದು ಎಂಬ ನಿಯಮಗಳಿದ್ದವು ಈ ಜನ್ಮದಲ್ಲಿ ತಪ್ಪಸ್ಸಿನಿಂದ ಕರ್ಮಕ್ಷಯ ಮಾಡಿಕೊಂಡು ಮುಂದಿನ ಜನ್ಮದಲ್ಲಿ ಪುರುಷರಾಗಿ ಹುಟ್ಟಿ ಮೋಕ್ಷ ಸಂಪಾದಿಸುವ ಉದ್ದೇಶ ವಾಗಿತ್ತು. ಕಂತಿಯರಿಗೆ. ಅನೇಕ ಶಿಷ್ಯರಿದ್ದರು

ಪ್ರತ್ಯೇಕ ಮಠಗಳಿದ್ದವು **'ಸಿಸಾಮಿಯದ್ದೆ'** ಎಂಬಾಕೆ ಸಾವು ಬರುವದನ್ನು ತಿಳಿದು ತಲೆ ಕೂದಲು ಕಿತ್ತಕೊಂಡು ಪ್ರಭಾವತಿಕಂತಿಯರೆಂದು ಹೆಸರಿಟ್ಟುಕೊಂಡು ಸನ್ಯಾಸನ ವಿಧಿ ಯಿಂದ ಮಡಿಯತ್ತಳೆ ತಮಿಳುನಾಡಿನಲ್ಲಿ ಕಂತಿಯರು ಸಂಘಗಳೇ ಇದ್ದವು 3 ಸಂಘಃ ಮೂಲ ನಂದಿ ಯಾಪನೀಯ ದ್ರಾವಿಡ ಶ್ರೀಸಂಘ ಕಿತ್ತೂರು 4 ಚಾತುರ್ಮಾಸ 4 ತಿಂಗಳ ಮಳೆಗಾಲದಲ್ಲಿ ಒಂದೇ ಕಡೆ ಇರುವುದು 5 ಗಣಗಳು: ದೇವ ಸೇನ ಬಲಾತ್ಕಾರ ಬಳಗಾವಿ ದೇಶಿಯ ದ್ರಮಿಳ್ ಪುನ್ನಾಗ ವೃಕ್ಷ ಮೆಲ ನಂದಿ ಕವಾಡ ಸೂರಸ್ತ ಕ್ರಾಣೂರ್ ಕಾರೆಯ ಆಜಿ 6 ಗಚ್ಚಗಳು ಪೂಗರಿ ಪುಸ್ತಕ ತಗರಿಗಲ್ ಸರಸ್ವತಿ ಕೋಫಿರ್ ಚಿತ್ರಕೂಟ ತಂತ್ರೀಣಿಕ ಮೇಘ ಪಾಶಾಣ 7 ಅನ್ವಯ ಪೂರಳ್ ಪಾಷಾಣ ಕೊಂಡಾಕುಂದ ಹನಸೋಗೆ ಮೈಲಾಪ ಆರುಂಗಳ 8 ಬಳಿ ಇಂಗುಳೇಶ್ವರ 5ನೇ ಶತಮಾನದಿಂದ 9 ಬಸದಿಗಳು ತಿಂಗಳ ಮಳಿಗಾಲ ಬಿಟ್ಟರೆ ಉಳಿದಂತೆ ವಿವರಿಸುತ್ತಿರಬೇಕು.

**(ಯಶೋಧ ಚರಿತೆ)** ಆ ತಪಸ್ಸಿನಿಂದ ದೇವಲೋಕಕ್ಕೆ ಸುಂದರ ನಂದಿ ಪ್ರವರಸೇನ ಮುನಿ ಅಮರೇಂದ್ರ ವಾಸಕ್ಕೆ ಹೋದರು ಮುಕ್ತಿಯನ್ನು ಸಂಪಾದಿಸಿದರು ಜೀವನ ಮಳೆಬಿಲಿನಂತೆ ಮಿಂಚಿನಂತೆ ಮಂಜಿನಂತೆ ಸುಂದರ ವಾದರೂ ಕ್ಷಣಿಕ ಎಂದು ವೈರಾಗ್ಯ ಸ್ವಿಕರಿಸಿದ್ದಾರೆ. ಮ್ಯಾತ್ಯುವರ ವಾನ್ ಅಜೀವವರು ರೋಗಕ್ಕೆ ತುತಾದವರು ಹಾವಿಂದ ಕಚ್ಚಿಸಿಕೊಂಡು ಪ್ರಾಣದ ಆಸೆ ತೊರೆದವರು ಆಪ್ತರ ಸಾವಿಂದ ವೈರಾಗ್ಯ ಬರುವವರು ಭಕ್ತಿ ಪ್ರೆತ್ಯಾಖ್ಯಾನ ಆಹಾರದ ಪೂರ್ಣ ನಿರಾಕರಣಿ ಪಂಡಿತ ಮರಣವು ಇಂಗಿನೀಮರಣ ಸನ್ಯಾಸಿ ಹುಲಿನ ಹಾಸಿಗೆ ಮೇಲೆ ಮಲಗಿಸದೆ ಬರೆಯ ನೆಲದ ಮೇಲೆ ಮಲಗಿಸುತ್ತಿದರು.

ಆಹಾರ ತ್ಯೆಜಿಸುವ ಮಹಿಳೆಯರು ಮಾಚಿಕಟ್ಟಿ ದುರ್ಧರ ಸನ್ಯಾಸನ ಶ್ರವಣಬೆಳಗೊಳದಲ್ಲಿ ಒಂದು ತಿಂಗಳ ಉಪವಾಸ ಮಾಡಿದಳು ನಿಸಿದಿ (ಗ) ಸನ್ಯಾಸದ ವಿಧಿಯಿಂದ ಮಡಿದವರು ಸ್ಮಾರಕ (ವೀರರಿಗೆ ಸ್ಥಾಪಿಸಿದಂತೆ) ಕಲ್ಲು ನಿಲ್ಲಿಸುವುದು ಇದೇ ನಿಸಿದಿಕಲ್ಲು ನಿಸಿಧಿಗೆ ನಿಸಿಧಿ ನಿಶೀಧಿಕಾ ನಿಶಿದ್ಯಾಲಯ ನಿಶಿದಿಗೆ. ಇವು ಬಸದಿ ಮುಂದೆ ಪ್ರತ್ಯೇಕ ಶಿಲಾಪಲಕ ಬಸದಿಯ ಕಂಬಗಳು ಮೇಲೆ ಊರು ಹೊರಗಿನ ಹೊಲದಲ್ಲಿ ನೆಟ್ಟ ಕಲ್ಲು ಬಂಡೆಗಳ ಮೇಲೆ ಒಂದ ಇಲ್ಲಿ ಸನ್ಯಾಸದ ವಿಷಯ ಹೇಳಿರಬಹುದು ಎರಡು ಸನ್ಯಾಸ ಸ್ವೀಕರಿಸಿದ ವ್ಯೆಕ್ತಿಯ ಚಿತ್ರ ಇರಬಹುದು 3 ಜಿನಸ್ತೋತ್ರ ಹೇಳುತ್ತಿರುವ ಗುರು ಗುರುವಿನ ಮುಂದೆ ಪುಸ್ತಕವಿರುವ ವ್ಯಾಸಪೀಠ (ಅಥವಾ ಠವಣಿ ಕೋಲು ಇದ್ದಕ್ಕೆ ಗೂಂಡೆಗಳುಂಟು ವ್ಯಾಸನಪೀಠದ ಇನ್ನೊಂದು ಕಡೆ ವ್ರತಧ್ಯಾ ಜಿನಸ್ತೋತ್ರ ಕೇಳುತ್ತಿರುವ ವ್ಯಕ್ತಿ ಚಿತ್ರದಲ್ಲಿದ್ದಾನೆ.

ಪಂಪನ ಮುತ್ತಜ್ಜನ ತಂದೆ ಮಾಧವ ಸೋಮಯಾಜಿ ಯಜ್ಞಯಾಗಾದಿಗಳನ್ನು ಮಾಡಿ ಎಲ್ಲರಿಂದಲೂ ಪೂಜ್ಯನೆನಿಸಿದ್ದವನು ಆತನಿಂದ ಕ್ರಮವಾಗಿ ಅಭಿಮಾನ ಚಂದ್ರ ಕೂಮರಯ್ಯ ಅಭಿರಾಮದೇವರಾಯ ಇವರ ಮಗ ಮೊಮ್ಮಗ ಮರಿಮಗನಾಗಿ ಜನಿಸಿದರು. ಈ ಅಭಿರಾಮದೇವರಾಯನೇ ಪಂಪನ ತಂದೆ ಈತನ ಹೆಸರು ಭೀಮಪ್ಪಯ್ಯನೆಂದು ಈತಿಚಗೆ ತಿಳಿದು ಬಂದಿದೆ. ಈತನು ಸ್ವಜಾತಿಯನ್ನು ತ್ಯಜಿಸಿ ಜೈನಮತಾವಲಂಬಿಯಾದನು ಬ್ರಾಹ್ಮಣ ಜಾತಿ ಉತ್ತಮವಾದುದಾದರೂ ಅದು ಅಹಿಂಸಾ ಪರಮೋಧರ್ಮವನ್ನು ಅಳವಡಿಸಿಕೊಂಡರು ಅತ್ಯುತ್ತಮವಾದೆಂತಾಯಿತೆಂದು ಪಂಪನ ಭಾವನೆ.

ಬಾಳೆದಿಂಡಿನ ಮಧ್ಯದಲ್ಲಿ ಕಾಣಬಿರುವ ನಸುಕಪ್ಪು ಬಣ್ಣ ಮೃದುವಾದ ಗುಂಗುರುಕುದಲು ಕಮಲದಂತೆ ದುಂಡಾದ ಮುಖ ಪಟ್ಟಸವಾದ ಸುಕುಮಾರದೇಹ ಹಿತಮಿತವಾದ ಮೃದುವಾದ ಮಾತುಗಳು ಇವುಗಳಿಗೆ ಒಪ್ಪದಂತೆ ಮಗೋಹರವಾದ ವೇಷ ಭೂಷಣ ಹೀಗೆ ಸೊಗಸುಗಾರ ಪುಟ್ಟಶಾಮಿಯಾದ ಈತನು ವನಿತಾಕಟಾಕ್ಷ ಕುವಲಯುವನಚಂದ್ರವಾಗಿದ್ದಂತೆ ಈ ರಸಿಕ ಶಿಖಾಮಣಿಯು ಸರಸ್ವತಿಯು ಧಹಿಸಿರುವ ಮಣಿಹಾರವಂತೆ.

**ಪೊನ್ನ:** ರತ್ನತ್ರಯರಲ್ಲಿ ಎರಡೆನೆಯವನಾದ ಪೊನ್ನ ರಾಷ್ಟ್ರಕೂಟ ಚಕ್ರವರ್ತಿಯಾದ ಮುಮ್ಮಡಿಕೃಷ್ಣನ (ಕ್ರಿ.ಶ.939–968) ಆಸ್ಥಾನ ಕವಿಯಾಗಿದ್ದು ಆದ್ದರಿಂದ ಈತನ ಕಾವ್ಯರಚನೆ ಸುಮಾರು ಕ್ರಿ.ಶ.950ರ ಹಿಂಚುಮುಂಚಿನಲ್ಲಿ ನಡೆದಿರಬೇಕು ಈತನೂ ಪಂಪನಂತೆ ವೆಂಗಿಮಂಡಲದಿಂದ ಬಂದವೆ ಇರಬೇಕು ವೆಂಗಿ ಮಂಡಲದ ಪುಂಗನೂರಿನಲ್ಲಿ ನಾಗಮಯ್ಯ ಎಂಬ ಒಬ್ಬ ಜೈನ ಬ್ರಾಹ್ಮಣ ಇದ್ದ ಈಗನಿಗೆ ಮಲ್ಲಪ್ಪ ಪುಣ್ಣಿಮಯ್ಯ ಎಂಬಿಬ್ಬರು ಸುಪುತ್ರರಿದ್ದರು ಅವರು ತಮ್ಮ ಗುರುವಾದ ದಿನಚಂದ್ರ ದೇವನು ಕಾಲವಾಗಲು ಆತನ ಸದ್ಗತಿಗಾಗಿ ಪೊನ್ನ ಕವಿಯಿಂದ ಹದಿನಾರನೆಯ ತೀರ್ಥಂಕರನ ಭವಾವಳಿಗಳನ್ನು ಒಳಗೊಂಡು ಶಾಂತಿಪುರಾಣವನ್ನು ಬರೆಸಿದರಂತೆ ಅವರಲ್ಲಿ ಹಿರಿಯನಾದ.

ಮಲ್ಲಪ್ಪನಿಗೆ ಅತ್ತಿಮಬ್ಬೆಯೆಂಬ ಮಗಳಿದ್ದಳು ದಾನಚಿಂತಾಮಣಿಯೆಂದು ಕೀರ್ತಿವೆತ್ತಿರುವ ಈ ಮಹನಿ ಯಳು ಪೊನ್ನನ ಶಾಂತಿಪುರಾಣದ ಸಹಸ್ರ ಪ್ರತಿಗಳನ್ನು ಬರೆಸಿ ಸುವರ್ಣ ಜಿನಪತ್ರಿಮೆಗಳೊಡನೆ ಅವನು ದಾನ ಮಾಡಿದಳಂತೆ ಪೊನ್ನನ ಸ್ವಾಮಿಯಾದ ಮುಮ್ಮಡಿ ಕೃಷ್ಣನು ಶ್ರೀರಾಮನ ವೇಷಾಧಾರಿಯಾಗಿರಬಹುದೊ ಏನೋ ಈ ಗ್ರಮಥ ಉಪಲಬ್ದವಾಗಿಲ್ಲ ಪೊನ್ನನು ತನ್ನ ಈ ಕಾವ್ಯದಲ್ಲಿ ಹದಿನಾಲ್ಕು ಆಶ್ವಾಸಗಳಿವೆಯೆಂದು ಪದಿನಾಲ್ಕು ಭುವನಂಗಲ ಪದಿನಾಲ್ಕಾತ್ವಾಸ ರಚನೆಗೆಂ ಬೆಲೆಯುಕ್ಕಂ ಎಂದು ಹೇಳಿಕೊಂಡಿದ್ದಾರೆ.

**ರನ್ನ:** ರತ್ನತ್ರಯರಲ್ಲಿ ಕಡೆಯವನಾದ ರನ್ನ ಅಥವಾ ರನ್ನನ ಅಂಕಿತನಾಮ ಅದ್ವರ್ಥನಾಮವು ಆತನ ಕವಿರತ್ನ ಅನ್ವರ್ಯ ಕವಿರತ್ನ ರತ್ನತ್ರಯರನ್ನು ಮೊದಲು ಹೆಸರಿಸಿದವನ್ನು ಆತನೇ ಅಜಿಪುರಾಣ, ಸಾಹಸ ಭೀಮ ವಿಜಯ (ರನ್ನಕಂದ) ಚಕ್ರೇಶ್ವರ ಚರಿತೆ ಪರಶುರಾಮ ಚರಿತೆ ಎಂಬ ಗ್ರಂಥಗಳನ್ನು ತಾನು ಬರೆದಿರುವು ದಾಗಿ ಆತ ಹೇಳಿಕೊಂಡಿದ್ದಾನೆ. ಇವುಗಳಲ್ಲಿ ಮೊದಲ ಎರಡು ಅಖಂಡವಾಗಿಯೂ ರತ್ನಕಂದ ಕೇಲವು ಪದ್ಯಗಳು ಈ ಉಪಲಬ್ದವಾಗಿವೆ ಆತನ ಸಾಹಸ ಭೀಮವಿಜಯ ಅಥವಾ ಗದಾಯುದ್ದವೇ

ಚಕ್ರೇಶ್ವರ ಚರಿತೆ ಯಾಗಿರ ಬಹುದೆಂದು ಕೆಲವು ಪಂಡಿತರ ಊಹೆ ಸಮರ ಪರಶುರಾಮನೆಂದು ಪ್ರಖಾತನಾಗಿ ರನ್ನನ ಏಳಿಗೆಗೆ ಕಾರಣ ಕರ್ತನಾದ ಚಾವುಂಡರಾಯನನ್ನ ಕುರಿತು ಗ್ರಂಥವಿರಬೇಕು ಪರಶುರಾಮಚರಿತೆ ಈ ಎರಡು ಕಾವ್ಯಗಳೂ ಈಗ ಉಪಲಬ್ದವಾಗಿಲ್ಲ.

ಪಂಪನಂತೆ ರತ್ನಕವಿಯು ತನ್ನ ಕಾವ್ಯಗಳಲ್ಲಿ ತನ್ನ ವಿಚಾರವನ್ನೆಲ್ಲ ಅಮಾಲಾಗ್ರವಾಗಿ ಹೇಳಕೊಂಡಿದ್ದಾನೆ. ಆತನ ಜನನ ಬೆಳುಗಲಿನಾಡಿನ ಮುದಮಳಲ (ಈಗಿನ ಮುದೊಳ್) ತಾಯಿ ಅಬ್ಬಲಬ್ಬೆ ತಂದೆ ಜಿನೇಂದ್ರವಲ್ಲಭ ಕ್ರಿ.ಶ.949ಕ್ಕೆ ಸರಿಯೋಗುವ ಸೌಮ್ಯ ಸಂವತ್ಸರದೇ ಈತನ ಜನನ ದೃಡ ಬಾಹು ರೇಚಣ ಮಾರಯ್ಯ ಎಂಬುವರು ಈತನ ಅಣ್ಣಂದಿರು ಚಿಕ್ಕಂದಿನ ಶ್ರವಣಬೆಳಗೊಳದ ಅಜಿತಸೇನಚಾರ್ಯ ಬಳಿಯಲ್ಲಿ ಈತ ವಿದ್ಯಾಭ್ಯಾಸ ಮಾಡಿದ ಕನ್ನಡ ಸಂಸ್ಕೃತಿಗಳಲ್ಲಿ ಸಂಪ್ರಸಿದ್ದವಾಗಿದ್ದ ಗ್ರಂಥಗಳೆಲ್ಲ ಆತನಿಗೆ ಕರತಲಾಮಲಕವಾಗಿರಬೇಕು. ಶ್ರವಣ ಬೆಳಗೊಳದ ಸಣ್ಣ ಬೆಟ್ಟದ ಮೇಲಿರುವ ದೊಡ್ಡ ಬಂಡೆಯೊಂದರ ಮೇಲೆ ಶ್ರೀ ಕವಿರತ್ನ ಎಂದು ಕೊರೆದ ಅಕ್ಷರಗಳು ಕಂಡುಬರುತ್ತವೆ. ಬಾಲಕನಾದ ರನ್ನನೆ ಅವುಗಳನ್ನು ಕೆತ್ತಿರಬೇಕೆಂದು ಒಂದು ಊಹೆ ಚಿಕ್ಕಂದಿನಲ್ಲಿಯು ಕಾವ್ಯ ದೇವಿ ಆತನನ್ನು ಒಲಿದಳೇಂದು ತೋರುತ್ತದೆ. ಮೊದಮೊದಲು ಸಾಮಂತ ರಾಜರಲ್ಲಿ ಉದಿತೋದಿತನಾಗಿ ಮಂಡಲೇಶ್ವರ ರಿಂದ ಅಭ್ಯುದಯವನ್ನ ಪಡೆದು ಕಡೆಗೆ ಚಕ್ರವರ್ತಿಯಿಂದ ಉದಯಪರಂಪರೆಯನ್ನು ಪಡೆದುದಾಗಿ ಕವಿ ಹೇಳಕೊಂಡಿದ್ದಾನೆ. ಅತಿಮಬ್ಬೆಯ ನೆನಪಿಗಾಗಿ ಅತ್ತಿ ಮಬ್ಬೆಯಂದು ಹೆಸರು ಇಟ್ಟನು ಚಾಲುಕ್ಯ ಚಕ್ರವರ್ತಿ ಯಾದ ತೈಲಪ ಮತ್ತು ಅವನ ಮಗ ಸತ್ಯಾಶ್ರಯ ಇವರ ಆಶ್ರಯದಲ್ಲಿ ಉದಯ ಪರಂಪರೆಯನ್ನು ಪಡೆದು ಕವಿ ಚಕ್ರವರ್ತಿ ಎಂಬ ಬಿರುದನ್ನು ಅನೇಕ ಮಾನಮರ್ಯಾದೆಗಳನ್ನೂ ಪಡೆದನ್ನು ಪೊನ್ನನ ಶಾಂತಿಪುರಾಣ ಸಾವಿರ ಪ್ರತಿಗಳನ್ನು ದಾನ ಮಾಡಿದ ದಾನ ಚಿಂತಾಮಣಿ ಅತ್ತಿಮಬ್ಬೆಯೇ ರನ್ನನ ಪೋಷಕಗಳಾಗಿದ್ದು ಆತನಿಂದ ಇದನ್ನು ಬರೆಸಿದಳು ಕವಿಯ ತನ್ನ ಪುರಾಣ ಕಾವ್ಯದಲ್ಲಿ ಅತಿಮಬ್ಬೆಯ ಇತಿಹಾಸವನ್ನೆಲ್ಲ ವಿಸ್ತಾರವಾಗಿ ಕೊಟ್ಟ ಆಕೆಯ ದಾನಗುಣವನ್ನು ಹಾಡಿ ಹರಿಸಿದ್ದಾರೆ. ಆಕೆಯನ್ನು ಅಜರಾಮರಳಾಗಿ ಮಾಡಿದ್ದಾನೆ. ಕವಿಯ ತನ್ನ ಈ ಗ್ರಂಥ ಪುರಣವಾಗ್ಗಿರುವಂತೆ ಕಾವ್ಯ ರತ್ನವೂ ಆಗಿರವುದಾಗಿ ಹೇಳಿಕೊಂಡಿದ್ದಾನೆ.

**ಜೈನ ಧರ್ಮ ಇಳಿಮುಖ:** ತೊಲಗದೆ ಜೈನ ಮಾರ್ಗದೊಳ್ ನಿಶ್ಚಳರಪ್ಪುದು ಇದು 11ನೇ ಶತಮಾನದ ಮಧ್ಯ ಭಾಗದ ಶಾಸನೋಲ್ಲೆಖ ಕ್ರಿ.ಶ.982 ರಾಷ್ಟ್ರಕೂಟರ ಇಂದ್ರ ಶ್ರವಣ ಬೆಳಗೊಳದಲ್ಲಿ ಸಲ್ಲೇಖನದಿಂದ ಮಾಡಿದ ಗಂಗ ಮತ್ತು ರಾಷ್ಟ್ರಕೂಡ ಮನೆತನಗಳ್ ನಶಿಸಿದವು ರಾಜಾಶ್ರಯ ಇಲ್ಲದ್ದು ಯಕ್ಷೀ ಆರಾಧನೆ. ತಂತ್ರ ಮಂತ್ರಗಳ ಮೂಲಕ ದೇವದಾಸಿ ಪದ್ದತಿ ಲೊಕ್ಕಿಗುಂಡಿಯಲ್ಲಿ (ಲಕ್ಕಂಡಿ) ಅತಿಮಬ್ಬೆ ಕಟ್ಟಿಸಿದ ಬಸದಿಗಾಗಿ ಒಬ್ಬ ಸೊಳೆ ಇದ್ದು ಅವಳಿಗೂ ದಾನ ಬಿಡಲಾಯಿತು ವಾರವಿಲಾಸಿನಿ ವೀರಶೈವ ಧರ್ಮದ ಪ್ರಾಬಲ್ಯ ದಾಸಿಮಯ್ಯ ಏನರ ವಾಗ್ದಾದ ಜೈನಮೃಗಬೇಂಟಿಕಾರ ಜೈನ ಕುದಾರ ಅಣ್ಣಿಗೇರಿ ಶಾಸನ 1184 ಶಿವ ಭಕ್ತಸಾಮಂತ ಜೀವ ಸಮಯವನ ದಹನದಾನಗಳದು ವಿರುಪರಸ ದೇವರನ್ನು ಶಾಸನದಲ್ಲಿ ಹೊಗಳಿದ ಜೈನ ಧರ್ಮ ಅನೇಕಾಂತವಾದ ಏಕಾಂತದ ರಾಮಯ್ಯ ಶೈವಧರ್ಮ ಪ್ರಾಬಲ್ಯ ಐಹೊಳೆ ಮೇಗುತಿ ಶಾಸನ ಇರುವ ಕಟ್ಟಡ ಜೀನ ಬಸದಿ ಕ್ರಮೀಣ ಶೈವ ದೇಗುಲವಾಗುತ್ತದೆ. ಬಸದಿ ಶಿವಾಲಯವಾಗುತ್ತವೆ. ಜೈನ ಧರ್ಮದ ಅತಿರೇಕದ ಆಚರಣೆಗಳು ಇಳಿಮುಖವಾಗಲು ಕಾರಣವಾದವು.

## ಆಧಾರ ಗ್ರಂಥಗಳು:

1. ಕನ್ನಡ ಸಾಹಿತ್ಯ ಚರಿತ್ರೆ: ತ.ಸು. ಶಾಮರಾಯ.
2. ಕನ್ನಡ ಸಾಹಿತ್ಯ ಕೋಶ: ಡಾ. ರಾಜಪ್ಪ ದಳವಾಯಿ.
3. ಪ್ರಾಚೀನ ಮಧ್ಯಕಾಲೀನ ಕನ್ನಡ ಸಾಹಿತ್ಯ: ಪ್ರೊ. ಹೆಚ್. ಸಿದ್ದಲಿಂಗಯ್ಯ.